# ತರಕಾರಿ ಗಾಡಿ



ರಸ್ತೆಗೆ ಬಂದಿದೆ ಎಲ್ಲರೂ ನೋಡಿ
ಬಗೆ ಬಗೆಯ ತರಕಾರಿಯ ಗಾಡಿ
ಹೆಂಗಸರೆಲ್ಲರ ಜೊತೆ ಜೊತೆಗೂಡಿ
ಪುಟ್ಟ ಮಕ್ಕಳು ಬಂದರು ಓಡಿ.

ಗಾಡಿಯಲಿತ್ತು ಸೋರೆಕಾಯಿ
ದುಂಡು ದುಂಡನೆಯ ಕುಂಬಳಕಾಯಿ
ಬದಿಯಲ್ಲಿರುವುದು ಬೆಂಡೆ ಕಾಯಿ
ನಡುವಿನ ರಾಶಿಯು ತೊಂಡೆಕಾಯಿ

ಸೊಪ್ಪಿನ ಕಟ್ಟು ಈ ಕಡೆಯಲ್ಲಿ
ಮೆಣಸಿನಕಾಯಿ ರಾಶಿಯು ಇಲ್ಲಿ
ಕೆಂಪಿನ ಟೊಮೇಟೊ ಹಣ್ಣಿಹುದಿಲ್ಲಿ
ಚಂದದ ನೇರಳೆ ಬದನೆಯು ಎಲ್ಲಿ?

ಉದ್ದದ ನುಗ್ಗೇ ಕಾಯಿಯು ಉಂಟು
ಹಸಿರು ಬಣ್ಣದ ಹರಿವೆಯ ದಂಟು
ಆಲೂಗಡ್ಡೆಯ ರಾಶಿಯು ಉಂಟು.
ಸೊಪ್ಪು ತರಕಾರಿ ಆರೋಗ್ಯದ ಗುಟ್ಟು.

■ ಸವಿತಾ ಎಸ್.ಭಟ್, ಅಡ್ವಾಯಿ

# ಹಸಿರೇ ಉಸಿರು



ಹಸಿರೇ ಉಸಿರು
ದಟ್ಟವಾದರೆ ಹಸಿರು
ಗಟ್ಟಿ ನಿಮ್ಮ ಉಸಿರು
ಬೆಳೆಸಿರಿ ಮರಗಳನು
ಉಸಿರಾಡಿರಿ ಶುದ್ಧ ಗಾಳಿಯನು
ವೃಕ್ಷೋ ರಕ್ಷತಿ ರಕ್ಷಿತಃ
ಅರಿಯಿರಿ ಗಿಡನೆಟ್ಟು ಸ್ವತಃ
ಕಾಡಿದ್ದರೇನೇ ನಾಡು
ಮರೆತರೆ ನಮಗೇ ಕೇಡು
ನೀರು! ನೀರು ಎಲ್ಲೆಡೆ ಹಾಹಾಕಾರ
ಗಿಡ ನೆಡುವುದೊಂದೇ ಇದಕೆ ಪರಿಹಾರ
ಭೂ ಸವಳಿಕೆ, ಭೂ ಕುಸಿತ ಆಗಾಗ
ಯಾಕೆಂಬುದರಿವಾಯ್ತೇ ನಿಮಗೀಗ
ಪರಿಸರದಲ್ಲಿ ಅಸಮತೋಲನ
ಅರಣ್ಯ ನಾಶವೇ ಇದಕ್ಕೆಲ್ಲ ಕಾರಣ
ನೆಡಿರಿ ಮನೆಗೊಂದು ಮರ
ದೊರೆಯುವುದು ನಿಮಗೆ ವರ
'ಹಸಿರೇ ಉಸಿರು'– 'ಹಸಿರೇ ಉಸಿರು'
ಮರೆತರೆ ಬಿಡುವಿರಿ ನಿಟ್ಟುಸಿರು!

■ ಪ್ರೊ. ವೆಂಕಟೇಶ ಹುಣಶೀಕಟ್ಟೆ, ಹಲಗತ್ತಿ